(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರರವರ ನ್ಯಾಯಾಲಯ ಹೊಸಪೇಟೆ

ಸಂ/ಕಂ/ಪಹಣಿ/ಅಪೀಲು/50/2016-17 ದಿನಾಂಕ:21.09.2016.

## ಹಿಂಬರಹ

ವಿಷಯ: ಹೊಸಪೇಟೆ ತಾಲೂಕು ಹೊಸಪೇಟೆ ಹೋಬಳಿ ಅನಂತಶಯನಗುಡಿ ಗ್ರಾಮದ ಸ.ನಂ.24/ಸಿ/1 ವಿಸ್ತೀರ್ಣ: 01 ಎಕರೆ 32 ಸೆಂಟ್ಸ್ ಜಮೀನನ್ನು ವಿಲ್ ಪ್ರಕಾರ ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ ಬಗ್ಗೆ.

ಉಲ್ಲೇಖ: ಅರ್ಜಿದಾರರಾದ ಶ್ರೀ ಟಿ.ಜ್ಞಾನೇಶ್ವರ, ಇವರ ಅರ್ಜಿ ದಿ:18.07.2016.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಮನವಿ ಮೂಲಕ ಹೊಸಪೇಟೆ ತಾಲೂಕು ಹೊಸಪೇಟೆ ಹೋಬಳಿ ಅನಂತಶಯನಗುಡಿ ಗ್ರಾಮದ ಸ.ನಂ.24/ಸಿ/1 ವಿಸ್ತೀರ್ಣ: 01 ಎಕರೆ 32 ಸೆಂಟ್ಸ್ ಜಮೀನನ್ನು ವಿಲ್ ಪ್ರಕಾರ ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಿರುತ್ತೀರಿ.

ಸದರಿ ಅರ್ಜಿಯನ್ನು ಪರಿಶೀಲಿಸಲಾಗಿ, ಸದರಿ ವ್ಯಾಜ್ಯದ ಜಮೀನನ್ನು ಟಿ.ಜ್ಞಾನೇಶ್ವರ ತಂದೆ ಟಿ.ಗುರುನಾಥಪ್ಪ ಇವರಿಗೆ ಟಿ.ಗುರುನಾಥಪ್ಪ ತಂದೆ ಟಿ.ವೆಂಕಪ್ಪ ಇವರು ನೋಂದಾಯಿತ ವಿಲ್ಲುದಸ್ತಾವೇಜನ್ನು ಮಾಡಿಸಿರುವುದು ಕಂಡುಬಂದಿರುತ್ತದೆ. ಸದರಿ ವಿಲ್ಲು ದಸ್ತಾವೇಜಿನ ಪ್ರಕಾರ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿದ್ದು, ಸದರಿ ವಿಲ್ಲು ದಸ್ತಾವೇಜಿನ ಪ್ರಕಾರ ಹಕ್ಕು ಬದಲಾವಣೆ ಮಾಡಲು ಈ ಕಾರ್ಯಾಲಯಕ್ಕೆ ಅಧಿಕಾರವಿರುವುದಿಲ್ಲ.

ಸದರಿ ವ್ಯಾಜ್ಯದ ಜಮೀನು ಕುರಿತಂತೆ ತಾವು ನೋಂದಾಯಿತ ವಿಲ್ಲು ದಸ್ತಾವೇಜು ಬಗ್ಗೆ ಉಚ್ಚನ್ಯಾಯಾಲಯ ಬೆಂಗಳೂರು ದಿನಾಂಕ:28.05.2002 G.C.N.ನಾಗೇಂದ್ರಸಿಂಗ್ ವಿರುದ್ಧ ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಮತ್ತು ಇತರರು ಪ್ರಕರಣದಲ್ಲಿ ನಿಡಿರುವ ಆದೇಶ ಹಾಗೂ ನಿರ್ದೇಶನಗಳನ್ವಯ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಬೇಕಾಗಿರುತ್ತದೆ. ಕಾರಣ ತಾವು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ತಿಳಿಸಲಾಗಿದೆ. ಹಾಗೂ ತಮ್ಮ ಪ್ರಕರಣವನ್ನು ಇದೇ ಹಂತದಲ್ಲಿ ವಿಲೆಗೊಳಿಸಲಾಗಿದೆ.

Sub Divisional Magistrate, Hospet

ರವಾನಿಸಲಾಗಿದೆ: 24/9/16
ಕ್ರಮಾಂಕ
ದಿನಾಂಕ

ಸಹಾಯಕ ಆಯುಕ್ತರು,
ಹೊಸಪೇಟೆ.

ಇವರಿಗೆ,
ಶ್ರೀ ಟಿ.ಜ್ಞಾನೇಶ್ವರ
ವಾಸ: 7ನೇ ವಾರ್ಡ್,
ಅನಂತಶಯನಗುಡಿ,
ಹೊಸಪೇಟೆ.